**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.508/2025**

**CW- 1** **PW:3**

| | | |
|---|---|---|
| ಸಾಕ್ಷಿಯ ಹೆಸರು | ಃ | ರವಿ ಹೊಸಮನಿ |
| ತಂದೆ /ಗಂಡನ ಹೆಸರು | ಃ | ರಾಮಣ್ಣ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಪೊಲೀಸ್ ಪೇದೆ ನವನಗರ ಹುಬ್ಬಳ್ಳಿ |
| ವಾಸಸ್ಥಳ | ಃ | ನವನಗರ, ಹುಬ್ಬಳ್ಳಿ |

ದಿಃ **13.03.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಕಳೆದ 2 ವರ್ಷಗಳಿಂದ ಎ ಪಿ ಎಂ ಸಿ ನವನಗರ ಪೋಲಿಸ್ ಠಾಣೆಯಲ್ಲಿ ನಾನು ಪೊಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 28.07.2024 ರಂದು ಕಮಿಷನರ್ ಸಾಹೇಬರ ಆದೇಶದ ಮೇರೆಗೆ ಪೆಟ್ರೊಲಿಂಗ ಕರ್ತವ್ಯ ಮಾಡುತ್ತಿದ್ದೆ. ಮಾದಕ ದ್ರವ್ಯ ಸೇವನೆ ಮಾಡವುದು ಆರೋಗ್ಯಕ್ಕೆ ಹಾನಿಕರ ಆಗಿದ್ದು ಅಂತವರ ಮೇಲೆ ಕ್ರಮ ಕೈಗೊಳ್ಳುವ ಸಲುವಾಗಿ ನಮ್ಮನ್ನು ನೇಮಕ ಮಾಡಿದ್ದರು. ನಾನು ಚಾಸಾಃ 5 ಮತ್ತು 6 ಪೆಟ್ರೊಲಿಂಗ ಕರ್ತವ್ಯಕ್ಕೆ ಬೆಳಿಗ್ಗೆ 10.30 ಕ್ಕೆ ಠಾಣೆಯಿಂದ ಹೊರಟೆವು. ನಮ್ಮ ಬೈಕನಲ್ಲಿ ನಾವು ಹೊರಟೆವು. ನವನಗರದಲ್ಲಿ ಪೆಟ್ರೊಲಿಂಗ ಮಾಡುತ್ತಿದ್ದಾಗ ವೀರಭದ್ರೇಶ್ವರ ದೇವಸ್ಥಾನದ ಹತ್ತಿರ 4 ಜನ ಸಿಗರೇಟ್ ಸೇದುತ್ತ ಸಂಶಯಾಸ್ಪದವಾಗಿ ನಿಂತಿದ್ದರು. ಅವರನ್ನು ನೋಡಿ ಸಂಶಯ ಬಂದು ಅವರನ್ನು ವಿಚಾರಿಸಿದಾಗ ಅವರು 1 ರಿಂದ 4 ಆರೋಪಿತರಾಗಿದ್ದಾರೆ. ಆ 4 ಜನರನ್ನು ವಿಚಾರಿಸಿದಾಗ ಉತ್ತರ ಹೇಳಲು ತಡವರಿಸಿದರು. ಅವರ ಕಣ್ಣುಗಳು ಕೆಂಪಾಗಿದ್ದವು ಸಂಶಯ ಬಂದು ಅವರನ್ನು ಠಾಣೆಗೆ ಕರೆದುಕೊಂಡು ಬಂದೆವು. ನಮ್ಮನ್ನು ನೋಡಿದ ಕೂಡಲೇ ಸಿಗರೇಟ ತುಂಡನ್ನು ನೆಲಕ್ಕೆ ಒಗೆದರು. ನಂತರ ನಾವು ಅವರನ್ನು ಪೊಲಿಸ್ ಠಾಣೆಗೆ ಕರೆದುಕೊಂಡು ಹೋಗಿ ಚಾಸಾಃ 19 ರವರ ಮುಂದೆ ಹಾಜರುಪಡಿಸಿದೆ. ನಂತರ ನನಗೆ ತೊರಿದ ದಾಖಲೆಯಂತೆ ದೂರು ಕೊಟ್ಟೆ. ನಾನು ನೀಡಿದ

ದೂರಿನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.6 ಎಂದು, ನನ್ನ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ನಂತರ ದಿಃ 29.07.2024 ರಂದು ಅಧ್ಯಾಪಕ ನಗರ ಕ್ರಾಸದಲ್ಲಿ ಪಂಚನಾಮೆ ನನ್ನ ಸಮಕ್ಷಮ ಮಾಡಿದರು. ಸದರಿ ಪಂಚನಾಮೆ ನಿಪಿ.2 ರ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ನಿಪಿ.3 ಪೊಟೊದಲ್ಲಿ ಕ್ರಮ ಸಂಖ್ಯೆ 5 ರಲ್ಲಿ ನಾನು ಇದ್ದೇನೆ. ಘಟನಾ ಸ್ಥಳ ನಾನೇ ತೊರಿಸುತ್ತಿದ್ದೇನೆ. ಆರೋಪಿ 1 ರಿಂದ 4 ರವರನ್ನು ಸೇದಲು ಎಲ್ಲಿ ಸಿಗುತ್ತದೆ ಅಂತಾ ಕೇಳಿದಾಗ ಅವರು 5 ನೇ ಆರೋಪಿಯ ಬಳಿ ತೆಗೆದುಕೊಂಡು ಬಂದಿದ್ದೇವೆ ಅಂತಾ ಹೇಳಿದರು. ಅವರ ಬಾತ್ಮಿಯ ಮೇರೆಗೆ ಆತ ಎಪಿಎಂಸಿ ಯಾರ್ಡ ಹುಬ್ಬಳ್ಳಿಯಲ್ಲಿ ಇರುತ್ತಾನೆ ಅಂತಾ ಹೇಳಿಕೆ ಕೊಟ್ಟೆ. ಬಾತ್ಮಿ ಆದಾರದ ಮೇಲೆಯೆ ಪಿ ಎಸ್ ಐ ಚಾಸಾಃ 20, ನಾನು ಎಪಿಎಂಸಿ ವಾಟರ ಟ್ಯಾಂಕ್ ಹತ್ತಿರ ಹೋದೆವು. ನಮ್ಮನ್ನು ನೋಡಿ 5 ನೇ ಆರೋಪಿ ಓಡುತ್ತಿದ್ದ ಅವನನ್ನು ನಾವು ಹಿಡಿದುಕೊಂಡೆವು. ಆತನ ಬಳಿ 37 ಗ್ರಾಂ ನ ಗಾಂಜಾ ಸಿಕ್ಕಿತು. ಒಂದು ನೀಲಿ ಬಣ್ಣದ ಸ್ಯಾಮಸಂಗ ಮೊಬೈಲ್ ಸಿಕ್ಕಿತು. ಹಾಳೆ ಸಿಕ್ಕವು. ಚಾಸಾಃ 12 ರವರ ಸಮಕ್ಷಮ ಪಂಚನಾಮೆ ಮಾಡಿದೆವು. ಪಂಚನಾಮೆ ಮಾಡಿ 5 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದದೆವು. ಈ ಪ್ರಕಾರ ನಾನು ಪುನಃ ಹೇಳಿಕೆ ಕೊಟ್ಟಿದ್ದೇನೆ. ನ್ಯಾಯಾಲಯದ ಮುಂದೆ ಇರುವ 5 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ನನಗೆ ತೊರಿದಂತೆ ಗಾಂಜಾವನ್ನು ಆ ದಿನ ಆರೋಪಿ ಕಡೆಯಿಂದ ವಶಪಡಿಸಿಕೊಂಡಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಅದೇ ರೀತಿ 5 ನೇ ಆರೋಪಿ ಬಳಿ ವಶಪಡಿಸಿಕೊಂಡ 3 ಪ್ಲಾಸ್ಟಿಕ ಕವರಗಳನ್ನು ಒಟ್ಟಾಗಿ ಮು ಮಾ 2 ಎಂದು, ರೂ 300/- ಹಣವನ್ನು ಮು ಮಾ 3 ಎಂದು, ಆರೋಪಿ ಕಡೆಯಿಂದ ವಶಪಡಿಸಿಕೊಂಡ ಸ್ಯಾಮಸಂಗ ಕಂಪನಿಯ ಮೊಬೈಲನ್ನು ಮು ಮಾ 4 ಎಂದು ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿ ಪರ ಶ್ರೀ ಸಿ ಬಿ ಜಿ ವಕೀಲರಿಂದಃ**

ಆರೋಪಿ ನಂ.1 ರಿಂದ 4 ರವರನ್ನು ದಿಃ 28.07.2024 ರಂದು ಹಿಡಿದಿರುತ್ತೇವೆ. ಆ ದಿವಸ ಅವರಿಗೆ ಗಾಂಜಾವನ್ನು ಎಲ್ಲಿಂದ ತೆಗೆದುಕೊಂಡು ಹಾಗೂ ಯಾರಿಂದ ತೆಗೆದುಕೊಂಡು ಬಂದಿರಿ ಅಂತಾ ವಿಚಾರ ಮಾಡಿದೆ. ಈ ಸಂಗತಿಯನ್ನು ನನ್ನ ದೂರಿನಲ್ಲಿ ತೊರಿಸಿಲ್ಲ ಎಂದರೆ ಸರಿ. ಚಾಸಾಃ 20 ನನ್ನ ಮೇಲಾಧಿಕಾರಿ ಎಂದರೆ ಸರಿ. ಆರೋಪಿ ಯಾವದೇ ಗಾಂಜಾ

ಮಾರಾಟ ಮಾಡುತ್ತಿರಲಿಲ್ಲ ಆತ ಸಿಕ್ಕಿಯೂ ಇಲ್ಲ ಆದರೂ ಕೂಡ ಆತನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ದೂರು ಕೊಟ್ಟ 22 ದಿವಸದ ನಂತರ ಆರೋಪಿಯ ಮೇಲೆ ಪುನರ್ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ತನಿಖೆ ವೇಳೆಯಲ್ಲಿ 20-22 ದಿವಸ ಆದ ಮೇಲೆ ಆರೋಪಿ ಸಿಕ್ಕ ಎಂದು ನುಡಿಯುತ್ತಾರೆ. 22 ದಿವಸ ಮೊದಲೇ ಆರೋಪಿ ನಂ .5 ರವರ ಬಗ್ಗೆ ಮಾಹಿತಿ ಬಂದಿತು. ಆರೋಪಿ ನಂ.5 ರವರ ಬಗ್ಗೆ ಮಾಹಿತಿ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ರಿಂದ 4 ರವರು 5 ನೇ ಆರೋಪಿಯ ಹೆಸರು ಹೇಳದೇ ಇದ್ದರೂ ಸಹ ಹೇಳಿದ್ದಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುದ್ದೆಮಾಲು ನಂ.1 ರಿಂದ 3 ಗಳಿಗೂ ಯಾವದೇ ಸಂಬಂದ ಇರದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

2. ಈ ಹಿಂದೆ ನವನಗರ ಪೊಲಿಸ್ ಠಾಣೆಯಲ್ಲಿ ಕೆಲ ಪೊಲಿಸ್ ಪೇದೆಗಳು ಮತ್ತು ಪಿ ಐ ಇವರು ಗಾಂಜಾ ಪ್ರಕರಣಕೆ ಸಂಬಂದಪಟ್ಟಂತೆ ಅಮಾನತ್ತುಗೊಂಡಿದ್ದರು ಎನ್ನುವ ವಿಚಾರ ನನಗೆ ಗೊತ್ತು. ಆದರೆ ಆಗ ನಾನು ಆ ಠಾಣೆಯಲ್ಲಿ ಇರಲಿಲ್ಲ. ಆ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆ ನಡೆದು ಆರೋಪಿ ಅವರುಗಳ ಮೇಲೆ ಸಾಕ್ಷ್ಯ ನುಡಿದಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆತ ಸಾಕ್ಷಿ ಹೇಳಿದ್ದರಿಂದ ನಮ್ಮ ಮೇಲಾಧಿಕಾರಿಗಳು ಆರೋಪಿಯ ವಿರುದ್ದ ಪ್ರಕರಣ ದಾಖಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವದೇ ಸಂಬಂದ ಇರದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಪ್ರಿ.ದಿ.ನ್ಯಾ.ಹುಬ್ಬಳ್ಳಿ.

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.508/2025**

**CW- 12** **PW:4**

| | | |
|---|---|---|
| ಸಾಕ್ಷಿಯ ಹೆಸರು | ಃ | ಶಿವಪ್ರಕಾಶ ನಾಯ್ಕ |
| ತಂದೆ /ಗಂಡನ ಹೆಸರು | ಃ | ಲೇಟ್ ರಾಜೇಂದ್ರ ನಾಯ್ಕ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಡಿವಾಯ್ ಎಸ್ ಪಿ |
| ವಾಸಸ್ಥಳ | ಃ | ಹುಬ್ಬಳ್ಳಿ |

ದಿಃ **13.03.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಪೆಬ್ರವರಿ 2024 ರಿಂದ 2026 ಪೆಬ್ರವರಿ ವರೆಗೆ ಎಸಿಪಿ ಉತ್ತರ ಹುಬ್ಬಳ್ಳಿಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿಃ 20.08.2024 ರಂದು ಪಿ ಎಸ್ ಐ ಚಾಸಾಃ 20 ರವರು ಕೇಳಿಕೊಂಡಂತೆ ಕ್ರೈಮ್ ನಂ.74/2024 ಹಾಗೂ 75/2024 ಇದರಲ್ಲಿ ಆರೋಪಿತನಾದಂತಹ ಅರ್ಜುನ ವಡ್ಡರ ಈತನು ಎಪಿಎಂಸಿ ಯಾರ್ಡನಲ್ಲಿ ನೀರಿನ ಟ್ಯಾಂಕ್ ಹತ್ತಿರ ಓಡಾಡುತ್ತಿರುವುದಾಗಿ ಆತನನ್ನು ವಶಕ್ಕೆ ಪಡೆಯಲು ಅನುಮತಿ ಕೇಳಿದ್ದು ಅದರಂತೆ ನಾನು ಅನುಮತಿ ನೀಡಿದೆ. ನಂತರ ಅವರು ಆರೋಪಿಯನ್ನು ವಶಕ್ಕೆ ಪಡೆದರು. ಆತನ ವಶದಲ್ಲಿ ಸುಮಾರು 37 ಗ್ರಾಂ ತೂಕದ ಗಾಂಜಾ ಸಿಕ್ಕಿದ್ದು ಆತನ ಅಂಗಶೋದನೆ ಮಾಡುವ ಸಲುವಾಗಿ ಪತ್ರಾಂಕಿತ ಅಧಿಕಾರಿಗಳು ಬರಬೇಕು ಅಂತಾ ಕೇಳಿದ್ದಕ್ಕೆ ಎಪಿಎಂಸಿ ಯಾರ್ಡನಲ್ಲಿರುವ ಘಟನಾ ಸ್ಥಳಕ್ಕೆ ನಾನು ತೆರಳಿದೆ. ಅಲ್ಲಿ ಈಗಾಗಲೇ ಹಾಜರಿದ್ದ ಪಂಚರಾದ ಚಾಸಾಃ 2 ಮತ್ತು 3 ಅವರ ಸಮಕ್ಷಮ ಆರೋಪಿ ಹೆಸರು ವಿಚಾರ ಮಾಡಲಾಗಿ ಅರ್ಜುನ ವಡ್ಡರ ನಂದೀಶ ನಗರ, ನವನಗರ ಅಂತಾ ತಿಳಿಸಿದರು. ಆತನನ್ನು ವಿಚಾರಿಸಿ ಅವನ ಒಪ್ಪಿಗೆಯ ಮೇರೆಗೆ ಆತನ ಅಂಗಶೋದನೆ ಮಾಡಲಾಗಿ ಆತನ ವಶದಲ್ಲಿದ್ದ ಒಂದು ಸ್ಯಾಮಸಂಗ ಮೊಬೈಲ್, ರೂ 300/- ಹಣ, 3 ಚಿಕ್ಕ ಪ್ಲಾಸ್ಟಿಕ ಕವರಗಳು ಸಿಕ್ಕಿದ್ದು ಅದನ್ನು ತನಿಖಾಧಿಕಾರಿಗಳಾದ ಚಾಸಾಃ 20 ರವರು ಪಂಚನಾಮೆ ಮುಖಾಂತರ ಜಪ್ತು

ಮಾಡಿಕೊಂಡು ಬೇರೆ ಬೇರೆ ಕವರನಲ್ಲಿ ಹಾಕಿ ಸೀಲ್ ಮಾಡಿ ಪಿ ಐ ನವನಗರ ಅಂತಾ ಹೇಳಿ ಸೀಲ್ ಹಾಕಿದರು. ಇದನ್ನು ಸಾಯಂಕಾಲ 6.30 ರಿಂದ 7.15 ರವರೆಗೆ ಪಂಚನಾಮೆ ಮಾಡಿದೆ. ನನ್ನ ಹೇಳಿಕೆಯನ್ನು ಸಹ ಚಾಸಾಃ 20 ರವರು ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.5 ಅಂತಾ ಗುರುತಿಸಲಾಗಿದ್ದು ಇದರಲ್ಲಿ ನನ್ನ ಸಹಿ ಇರುತ್ತದೆ. ನಾನು ಚಾಸಾಃ 20 ರವರಿಗೆ ನೀಡಿದ ಪರವಾನಿಗೆ ಪತ್ರ ಇದ್ದು ಅದನ್ನು ನಿಪಿ.7 ಎಂದು, ಇದರ ಮೂಲ ಪ್ರತಿಯನ್ನು ಸಿ.ಸಿ.507/2025 ರಲ್ಲಿ ಹಾಜರುಪಡಿಸಲಾಗಿದೆ. ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ.

ನಾನು ಚಾಸಾಃ 20 ರವರಿಗೆ ಆರೋಪಿಯ ಅಂಗಶೋಧನೆ ಮಾಡಲು ಒಪ್ಪಿಗೆ ನೀಡಿದ ಪತ್ರದ ಪ್ರತಿಯನ್ನು ನಿಪಿ.8 ಎಂದು, ಇದರ ಮೂಲ ಪ್ರತಿಯನ್ನು ಸಿ.ಸಿ.507/2025 ರಲ್ಲಿ ಹಾಜರುಪಡಿಸಲಾಗಿದೆ. ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಗಾಂಜಾ, ಪ್ಲಾಸ್ಟಿಕ ಕವರ್, ಹಣ ಮತ್ತು ಮೊಬೈಲ್ ಪೊನನ್ನು ನೋಡಿ ಗುರುತಿಸುತ್ತಿದ್ದು ಇವನ್ನು ಅ ದಿವಸ 5 ನೇ ಆರೋಪಿ ಕಡೆಯಿಂದ ವಶಪಡಿಸಿಕೊಂಡಿದ್ದು ಇವುಗಳನ್ನು ನೋಡಿ ಗುರುತಿಸುತ್ತಿದ್ದು ಇವನ್ನು ಈಗಾಗಲೇ ಮು ಮಾ 1 ರಿಂದ 4 ಅಂತಾ ಗುರುತಿಸಲಾಗಿದೆ. ನ್ಯಾಯಾಲಯದ ಮಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟಿವಾಲುಃ ಆರೋಪಿ ಪರ ಶ್ರೀ ಸಿ ಬಿ ಜಿ ವಕೀಲರಿಂದಃ**

ಆ ದಿವಸ ಪತ್ರಾಂಕಿತ ಅಧಿಕಾರಿಯಾಗಿದ್ದ ನನಗೆ ಘಟನಾ ಸ್ಥಳಕ್ಕೆ ಬರಲು ಸಾಯಂಕಾಲ 5 ಗಂಟೆಗೆ ಮಾಹಿತಿ ಬಂದಿತು. ಘಟನಾ ಸ್ಥಳದ ಚೆಕಬಂದಿ ಪೂರ್ವಕ್ಕೆ ಮೆಣಸಿನಕಾಯಿ ಮಾರುಕಟ್ಟೆಗೆ ಹೋಗುವ ದಾರಿ, ಪಶ್ಚಿಮಕ್ಕೆ ಅಮರಗೋಳಗೇ ಹೊಗುವ ದಾರಿ, ಉತ್ತರಕ್ಕೆ ಕಟ್ಟುತ್ತಿರುವ ಕಟ್ಟಡ ಅದರಾಚೆ ಅಮರಗೋಳ ಗ್ರಾಮ, ದಕ್ಷಿಣಕ್ಕೆ ನೀರಿನ ಟ್ಯಾಂಕ್ ಇದೆ. ಹೊಸದಾಗಿ ಕಟ್ಟುವ ಕಟ್ಟಡದಲಿಲ ಸಾಕಷ್ಟು ಕಾರ್ಮಿಕರು ಇರುತ್ತಾರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಯಾರು ಕಂಡು ಬರಲಿಲ್ಲ ಎಂದು ನುಡಿಯುತ್ತಾರೆ. ಕಟ್ಟಡದ ಸುತ್ತಮುತ್ತಲೂ ಹಾಕಿರುವ ಸಾಮಗ್ರಿಗಳು ಹೋಗಬಾರದು ಅಂತಾ ಸಿಸಿಟಿವಿ ಹಾಕಿದ್ದರು ಎನ್ನುವದನ್ನು ನಾನು ನೋಡಿಲ್ಲ. ಸುತ್ತಮುತ್ತಲೂ ಮನೆಗಳು ಹಾಗೂ ಅಂಗಡಿಗಳು ಇವೆ ಎಂದರೆ ಸಾಕ್ಷಿ ಮನೆಗಳು ಕಂಡು ಬಂದಿಲ್ಲ ಕೆಲ ಅಂಗಡಿಗಳು ದೂರದಲ್ಲಿ ಇದ್ದವು. ನಾನು ನನ್ನ ಅಧೀನ ಅಧಿಕಾರಿ

ನೀಡಿದ ದೂರಿಗೆ ಅನೂಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪತ್ರಾಂಕಿತ ಅಧಿಕಾರಿಯಾಗಿ ಘಟನಾ ಸ್ಥಳಕ್ಕೆ ಹೋಗಿಯೂ ಇಲ್ಲ ಹಾಗೂ ಯಾವದೇ ತಪಾಸಣೆ ಮಾಡಿಲ್ಲ ಎಂದರೆ ಸರಿಯಲ್ಲ.

2. ನವನಗರ ಪೊಲೀಸ್ ಠಾಣೆಯಲ್ಲಿ ಕೆಲವೊಂದು ಪೊಲೀಸ್ ಪೇದೆಗಳು ಗಾಂಜಾ ಪ್ರಕರಣಗಳಿಗೆ ಸಂಬಂದಪಟ್ಟಂತೆ ವಜಾ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಲಿಸನವರು ಮಾರಾಟ ಮಾಡುತ್ತಿದ್ದರು ಅಂತಾ ವಜಾ ಆಗಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ವೇಳೆಯಲ್ಲಿ ವಜಾ ಆದ ಪೇದೆಗಳ ವಿರುದ್ದ ಇಲಾಖಾ ವಿಚಾರಣೆ ಇದ್ದು ಅದರಲ್ಲಿ ಆರೋಪಿ ಸಾಕ್ಷಿದಾರನಾಗಿದ್ದ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಈ ವಿಚಾರ ಗೊತ್ತಿದ್ದರೂ ಸಹ ಪೊಲಿಸರ ಮೇಲೆ ಸಾಕ್ಷಿ ನುಡಿದಿದ್ದಾನೆ ಅಂತಾ ಈ ರೀತಿ ಆತನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮು ಮಾ 1 ರಿಂದ 3 ಕ್ಕೂ ಹಾಗೂ ಆರೋಪಿಗೂ ಯಾವದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವದೇ ಸಂಬಂದ ಇರದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಬಳಿ ತಪಾಸಣೇ ಮಾಡಿದಾಗ ರೂ 300/- ಹಾಗೂ ಪ್ಲಾಸ್ಟಿಕ ಕವರ್ ಸಿಕ್ಕಿದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.